ಆರ್.ಬಿ.ಐ/2006-2007/241
ಆರ್‌ಪಿಸಿಡಿ.ಸಿಓ.ಆರ್.ಎಫ್.ಬಿಸಿ.ಸಂ. 43/07.38.03/2006-07 ಜನವರಿ 31, 2007

ಎಲ್ಲಾ ರಾಜ್ಯ ಸಹಕಾರಿ ಬ್ಯಾಂಕುಗಳು
ಹಾಗೂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು.

ಮಾನ್ಯರೇ,

**ಸ್ವಚ್ಚ ನೋಟು ನೀತಿ – ನೋಟು ಕಟ್ಟುಗಳಿಗೆ ಪಿನ್ನು ಹಾಕುವುದು**

ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶವಿದ್ದರೂ ಸಹ ಕೆಲವು ಬ್ಯಾಂಕುಗಳು ನೋಟು ಕಟ್ಟುಗಳಿಗೆ ಪಿನ್ನುಹಾಕುವ ಕ್ರಮವನ್ನು ಮುಂದುವರಿಸಿರುವುದು ಗಮನಕ್ಕೆ ಬಂದಿರುತ್ತದೆ. ಈ ಕ್ರಮದಿಂದ ನೋಟುಗಳು ಹಾಳಗುವುದಲ್ಲದೆ ನೋಟುಗಳ ಜೀವಿತಾವಧಿಯನ್ನು ಕ್ಷೀಣಗೊಳಿಸುವುದರ ಜೊತೆಗೆ ಗ್ರಾಹಕನಿಗೆ ನೋಟು ಕಟ್ಟುಗಳನ್ನು ಬಿಚ್ಚುವುದು ಕಷ್ಟವಾಗುತ್ತದೆ.

2. ಬ್ಯಾಂಕುಗಳು ನೋಟುಗಳನ್ನು ಚಲಾವಣೆಗೆ ಯೋಗ್ಯ ಮತ್ತು ಚಲವಣೆಗೆ ಯೋಗ್ಯವಲ್ಲದ ಎಂದು ವಿಂಗಡಿಸದೆಯೇ, ಕೊಳೆಯಾದ ನೋಟುಗಳನ್ನು ಸಾರ್ವಜನಿಕರಿಗೆ ವಿತರಿಸುತ್ತಿರುವುದು ಗಮನಕ್ಕೆ ಬಂದಿದೆ. ಅಲ್ಲದೇ, ಸಡಿಲಿಸಿದ ಕಟ್ಟುಗಳಲ್ಲಿನ ನೋಟುಗಳ ಸಂಖ್ಯೆಯನ್ನು ಜಲಚಿಹ್ನೆ (ವಾಟರ್ ಮಾರ್ಕ್)ಯ ಮೇಲೆ ಬರೆಯುವ ಕ್ರಮವನ್ನು ಬ್ಯಾಂಕುಗಳು ಇನ್ನೂ ಅನುಸರಿಸುತ್ತಿವೆ. ಇದರಿಂದ ಜಲಚಿಹ್ನೆಯ ಗುರುತು ಹಾಳಾಗಿ ನೋಟುಗಳ ಗುರುತಿಸುವಿಕೆ ಕಠಿಣವಾಗಿ ಪರಿಣಮಿಸುತ್ತದೆ.

3. ಆದುದರಿಂದ, ತತ್ ಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ:

ಅ. ಯಾವುದೇ ನೋಟುಕಟ್ಟುಗಳಿಗೆ ಪಿನ್ನುಹಾಕುವ ಕ್ರಮವನ್ನು ಕೈ ಬಿಟ್ಟು ಅದರ ಬದಲು ಕಾಗದದ ಪಟ್ಟಿಯ ಮುಖಾಂತರ ನೋಟುಕಟ್ಟುಗಳನ್ನು ಸುರಕ್ಷಿತವಾಗಿ ಬಂಧಿಸುವ ಕಾರ್ಯವನ್ನು ಬ್ಯಾಂಕುಗಳು ಕೈಗೊಳ್ಳಬೇಕು

ಬ. ನೋಟುಗಳನ್ನು ಚಲಾವಣೆಗೆ ಯೋಗ್ಯ ಮತ್ತು ಯೋಗ್ಯವಲ್ಲದ ಎಂದು ವಿಂಗಡಿಸುವ ಕಾರ್ಯವನ್ನು ಬ್ಯಾಂಕುಗಳು ಕೈಗೊಂಡು, ಸ್ವಚ್ಛ ನೋಟುಗಳನ್ನು ಮಾತ್ರ ಸಾರ್ವಜನಿಕರಿಗೆ ನೀಡಬೇಕು. ಕೊಳೆಯಾದ ನೋಟುಗಳನ್ನು ಪಿನ್ನು ಮಾಡದ ಸ್ಥಿತಿಯಲ್ಲಿ ಕರೆನ್ಸಿ ಭಂಡಾರ(ಚೆಸ್ಟ್)ಗಳ ಆಂತರಿಕ ರವಾನೆಯ ಮುಖಾಂತರ ರಿಸರ್ವ್ ಬ್ಯಾಂಕಿಗೆ ಸಲ್ಲಿಸಬೇಕು.

ಸಿ. ನೋಟುಗಳ ಜಲಚಿಹ್ನೆ(ವಾಟರ್ ಮಾರ್ಕ್) ಜಾಗದ ಮೇಲೆ ಬರೆಯುವುದನ್ನು ಬ್ಯಾಂಕುಗಳು ಈ ಕೂಡಲೇ ನಿಲ್ಲಿಸತಕ್ಕದ್ದು.

4. ಈ ಸಂಬಂಧದಲ್ಲಿ ದಿನಾಂಕ ಜನವರಿ 31, 2007 ರಂದು ಹೊರಡಿಸಲಾದ ನಮ್ಮ ನಿರ್ದೇಶನ ಆರ್‌ಪಿಸಿಡಿ.ಸಿಓ.ಆರ್ ಎಫ್. ಡಿಐಆರ್ .ಸಂಖ್ಯೆ. 44/07.38-03/2006-07 ದ ಪ್ರತಿಯನ್ನು ಲಗತ್ತಿಸಲಾಗಿದೆ.

5. ದಯವಿಟ್ಟು ಸ್ವೀಕೃತಿಯನ್ನು ಸಂಬಂಧಿಸಿದ ಪ್ರಾದೇಶಿಕ ಕಛೇರಿಗೆ ನೀಡಿ.

ನಿಮ್ಮ ವಿಶ್ವಾಸಿ

(ಸಿ.ಎಸ್.ಮೂರ್ತಿ)
ಮುಖ್ಯ ಪ್ರಾಧಾನ ವ್ಯವಸ್ಥಾಪಕರು – ಪ್ರಭಾರಿ

ಆರ್‌ಪಿಸಿಡಿ.ಸಿಓ.ಆರ್ ಎಫ್.ಡಿಐಆರ್.ಸಂಖ್ಯೆ. 44/07.38.03/2006–07 ಜನವರಿ 31. 2007

**ಸ್ವಚ್ಚ ನೋಟು ನೀತಿ – ನೋಟು ಕಟ್ಟುಗಳಿಗೆ ಪಿನ್ನು ಹಾಕುವುದು**

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949ರ ಪ್ರಕರಣ 35(೦) ಹಾಗೂ ಪ್ರಕರಣ 56ರ ಜೊತೆಗೆ ಓದಿಕೊಂಡಾಗ ಅದರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸಿ ಭಾರತೀಯ ರಿಜರ್ವ್ ಬ್ಯಾಂಕ್ ಸಾರ್ವಜನಿಕ ಹಿತ ದೃಷ್ಟಿಯಿಂದ ಅಗತ್ಯ ಮತ್ತು ವಿಹಿತ ಎಂದು ಮನಗಂಡು ತತ್ ಕ್ಷಣವೇ ಜಾರಿಗೆ ಬರುವಂತೆ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿದೆ.

೧ ಹೊಸ/ಮರುಚಲಾವಣೆ/ಚಲಾವಣೆಗೆ ಯೋಗ್ಯವಲ್ಲದ ನೋಟುಕಟ್ಟುಗಳಿಗೆ ಪಿನ್ನು ಹಾಕುವ ಕಾರ್ಯವನ್ನು ಕೈಬಿಡತಕ್ಕದ್ದು ಮತ್ತು ಅದರ ಬದಲು ಅವುಗಳನ್ನು ಕಾಗದದ ಪಟ್ಟಿಯ ಮೂಲಕ ಬಂಧಿಸಿ ಸುರಕ್ಷಿತ ಸ್ಥಿತಿಯಲ್ಲಿ ಇರಿಸತಕ್ಕದ್ದು.

೨ ನೋಟುಗಳನ್ನು ಚಲಾವಣೆಗೆ ಯೋಗ್ಯ/ಯೋಗ್ಯವಲ್ಲದ ನೋಟುಗಳಾಗಿ ವಿಂಗಡಿಸುವ ಕಾರ್ಯವನ್ನು ಬ್ಯಾಂಕುಗಳು ಕೈಗೊಂಡು, ಸ್ವಚ್ಚ ನೋಟುಗಳನ್ನು ಮಾತ್ರ ಸಾರ್ವಜನಿಕರಿಗೆ ನೀಡಬೇಕು. ಕೊಳೆಯಾದ ನೋಟುಗಳನ್ನು ಪಿನ್ನು ಹಾಕದೇ ಬ್ಯಾಂಕುಗಳು ಕರೆನ್ಸಿ ಭಂಡಾರಗಳ ಆಂತರಿಕ ರವಾನೆಯ ಮೂಲಕ ಭಾರತೀಯ ರಿಜರ್ವ್ ಬ್ಯಾಂಕ್‌ಗೆ ಸಲ್ಲಿಸತಕ್ಕದ್ದು.

೩ ನೋಟಿನ ಜಲ ಚಿಹ್ನೆಯ ಜಾಗದ ಮೇಲೆ ಯಾವುದೇ ರೀತಿಯಲ್ಲಿ ಬರೆಯುವುದನ್ನು ಬ್ಯಾಂಕುಗಳು ಕೂಡಲೇ ನಿಲ್ಲಿಸತಕ್ಕದ್ದು.

(ವಿ.ಯಸ್. ದಾಸ್)
ಕಾರ್ಯಕಾರೀ ನಿರ್ದೇಶಕ